(ರೂ. ಕೋಟಿಗಳಲ್ಲಿ)

ಯೋಜನೆ	1990-2000 ಲೆಕ್ಕ		2000-2001 ಲೆಕ್ಕ		2001-2002 ಪರಿಷ್ಕೃತ	
	ಸಾಲ	ಅನುದಾನ	ಸಾಲ	ಅನುದಾನ	ಸಾಲ	ಅನುದಾನ
ರಾಜ್ಯ ಯೋಜನೆ	900.73	532.71	1029.40	621.71	1908.03	852.81
ಕೇಂದ್ರ ಯೋಜನೆ	0.17	135.94	0.03	154.39	0.16	237.13
ಕೇಂದ್ರ ಪುರಸ್ಕೃತ ಯೋಜನೆ	23.57	598.65	4.78	524.10	17.98	757.91
ಒಟ್ಟು	924.47	1267.30	1034.21	1300.20	1926.17	1847.85

ಕೇಂದ್ರ ವಲಯ ಯೋಜನೆ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳ ವಿವರಗಳನ್ನು 2002-2003ನೇ ವರ್ಷದ ಆಯವ್ಯಯ ಪುಸ್ತಕ ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿರುವ ಹಣದ ವಿವರಗಳು ಇದರಲ್ಲಿ ಮಟ 103 ರಿಂದ 506ರ ವರೆವಿಗೆ ಒದಗಿಸಲಾಗಿರುತ್ತದೆ. ಈ ಪುಸ್ತಕವನ್ನು ವಿಧಾನಸಭೆಯನ್ನು ಮಂಡಿಸಲಾಗಿರುತ್ತದೆ.

ಆ. ಕೇಂದ್ರ ವಲಯ ಯೋಜನೆಯಡಿ ಕೇಂದ್ರದ ಹಾಲು ಶೇಕಡ 100 ಇರುತ್ತದೆ. ಕೇಂದ್ರ ಪುರಸ್ಕೃತ ಯೋಜನೆಯಡಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪಾಲು ಯೋಜನೆಯನ್ನವಲಂಬಿಸಿ ಶೇಕಡ 50:50, 75:25 ಅಥವಾ 90:10 ಇರುತ್ತದೆ. ಕೆಲವು ಕೇಂದ್ರ ಪುರಸ್ಕೃತ ಯೋಜನೆಗಳ ಪಾಲು ಶೇಕಡ 100 ಇರುತ್ತದೆ. ರಾಜ್ಯದ ಪಾಲು ರಾಜ್ಯದ ಯೋಜನೆಯಡಿಯಲ್ಲಿ ಒದಗಿಸಿದ್ದು, ಅದರ ವೆಚ್ಚಗಳು ರಾಜ್ಯ ಯೋಜನೆ ವೆಚ್ಚದಲ್ಲಿ ಒಳಗೊಂಡಿರುತ್ತದೆ.

ಇ. ಖರ್ಚು ಮಾಡಿರುವ ಹಣದ ವಿವರಗಳು ಈ ಕೆಳಕಂಡಂತೆ ಇರುತ್ತದೆ:

(ರೂ. ಕೋಟಿಗಳಲ್ಲಿ)

ಯೋಜನೆ	1999-2000	2000-2001	2001-2002 (ಪರಿಷ್ಕೃತ ಅಂದಾಜು)
ರಾಜ್ಯ ಯೋಜನೆ	6362.90	7353.95	7903.77
ಕೇಂದ್ರ ಯೋಜನೆ	253.40	324.82	430.47
ಕೇಂದ್ರ ಪರಿಷ್ಕೃತ ಯೋಜನೆ	428.69	352.59	582.72
ಒಟ್ಟು	7044.99	8031.36	8916.96

ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ಆಯಾ ಯೋಜನೆಗಳಿಗೆ ಖರ್ಚು ಮಾಡಲಾಗುವುದು. ಆರ್ಥಿಕ ವರ್ಷದ ಕೊನೆಯಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ಖರ್ಚಾಗದೇ ಇದ್ದಲ್ಲಿ, ಸದರಿ ಮೊತ್ತವನ್ನು ನವೀಕರಿಸಿ ಮುಂದಿನ ವರ್ಷದಲ್ಲಿ ಖರ್ಚು ಮಾಡಲಾಗುವುದು.

ರಾಜ್ಯದ ರಸ್ತೆಗಳಲ್ಲಿ ಸೇತುವೆ ಕಾಮಗಾರಿ ಹಾಗೂ ಸುಂಕ ವಸೂಲಿ

800 (1051) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ): ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ನಿರ್ಮಾಣ ಹಂತದಲ್ಲಿರುವ ನೂತನ ರಾಜ್ಯ ಹೆದ್ದಾರಿ, ರಾಷ್ಟ್ರೀಯ ಹಾಗೂ ಇತರ ಪ್ರಮುಖ ರಸ್ತೆಗಳು ಮತ್ತು ರಸ್ತೆ ದುರಸ್ಥಿ, ಸೇತುವೆ ಕಾಮಗಾರಿ ಕೆಲಸಗಳಿಗಾಗಿ ಆ ರಸ್ತೆಯ ಮೂಲಕ ಸಂಚರಿಸುವ ವಾಹಗಳಿಂದ ಸುಂಕ (ತೆರಿಗೆ)ಯನ್ನು ವಸೂಲಿ ಮಾಡುವ ಕ್ರಮ ಇದೆಯೇ?

ಆ. ಈ ಸುಂಕ ವಸೂಲಿಯ ಕ್ರಮದ ಮಾನದಂಡಗಳೇನು ಯಾವ ಯಾವ ವಾಹನಕ್ಕೆ ಎಷ್ಟು, ಶುಲ್ಕ ವಸೂಲಿ ಮಾಡಲಾಗುತ್ತದೆ. ಇದನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲಾಗುವುದೇ ಅಥವಾ ರಸ್ತೆ ನಿರ್ಮಾಣ ಗುತ್ತಿಗೆದಾರರಿಗೆ ಇದನ್ನು ನೀಡಲಾಗಿದೆಯೇ, ಹೇಗೆ:

ಇ. ರಾಜ್ಯದ ಯಾವ ಯಾವ ಭಾಗಗಳಲ್ಲಿ ಈ ರೀತಿಯ ಸೇತುವೆ, ಇತರೆ ರಸ್ತೆ ನಿರ್ಮಾಣದ ಸುಂಕ ವಸೂಲಿ ಕ್ರಮ ಜಾರಿಯಲ್ಲಿದೆ.

ಈ. ರಸ್ತೆಗಳವಾರು ವಿವರಗಳನ್ನು ನೀಡುವುದು.

ಉ. ಬೆಂಗಳೂರು - ಮಂಗಳೂರು ರಸ್ತೆಯ ನಾಗಮಂಗಲ ಬೆಳ್ಳೂರು ಕ್ರಾಸ್ ಬಳಿ ಈ ರೀತಿಯ ಸುಂಕ ವಸೂಲಿಯನ್ನು ಮಾಡುತ್ತಿರುವುದು ನಿಜವೇ.

ಊ. ಎಲ್ಲಿಯವರೆಗೆ ಈ ರೀತಿ ಸುಂಕ ವಸೂಲಿ ಮಾಡಲಾಗುತ್ತದೆ, ಸಾರಿಗೆ ಸಂಸ್ಥೆಯ ವಾಹನಗಳಿಗೂ ಈ ತೆರಿಗೆ ವಸೂಲಿ ಮಾಡಲಾಗುತ್ತಿದೆಯೇ, ವಿವರಣೆ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಮಂತ್ರಿಗಳು) :

ಅ. ಇದೆ.

ಆ. ರಾಜ್ಯ ಹೆದ್ದಾರಿ: ಸರ್ಕಾರದ ಆದೇಶ ಸಂ: ಲೋಇ 12 ಸಿಬಿಆರ್ 95 ದಿನಾಂಕ 31.7.98 ರೀತ್ಯ ಸೇತುವೆಗಳಿಗೆ ಸುಂಕ ವಸೂಲಿ ಮಾಡಲಾಗುತ್ತದೆ. ವಿವಿಧ ವಾಹನಗಳಿಗೆ ಶುಲ್ಕ ವಸೂಲಿ ಮಾಡುವ ವಿವರಗಳನ್ನು ಅನುಬಂಧ-ಆ ಲಗತ್ತಿಸಿದೆ. ಸದರಿ ಸೇತುವೆ ಕಾಮಗಾರಿ ನಿರ್ಮಾಣ ವೆಚ್ಚವನ್ನು ಪರಿಗಣಿಸಿ, ಸೇತುವೆ ಮಾರ್ಗ ದಿನಪ್ರತಿ ಸಂಚರಿಸುವ 24 ಗಂಟೆಗಳಲ್ಲಿ ವಿವಿಧ ವಾಹನಗಳ ಸಂಖ್ಯೆಗಳಿಗನುಗುಣವಾಗಿ ಆಫ್‌ಸೆಟ್ ವ್ಯಾಲ್ಯು ನಿಗಧಿಪಡಿಸಿ ಸುಂಕ ವಸೂಲಿ ಅವಧಿಯನ್ನು ಮತ್ತು ಮೊತ್ತವನ್ನು ವೈಜ್ಞಾನಿಕವಾಗಿ ಗೊತ್ತುಪಡಿಸಲಾಗುತ್ತದೆ. ಅಂದಾಜು ರೂ. 50.00 ಲಕ್ಷಕ್ಕೆ ಮೇಲ್ಪಟ್ಟ ಹಾಗೂ ದಿನಾಂಕ 1-4-83 ನಂತರ ನಿರ್ಮಿಸಲಾಗಿರುವ ಸೇತುವೆಗಳಿಗೆ ಶುಲ್ಕ ವಸೂಲಾತಿ ಮಾಡಲಾಗುತ್ತದೆ. ಈ ಶುಲ್ಕ ವಸೂಲಿ ಮಾಡಲು ಖಾಸಗಿಯವರಿಗೆ ಗುತ್ತಿಗೆ ಆಧಾರದಲ್ಲಿ ನೀಡಲಾಗುತ್ತದೆ.

ರಾಷ್ಟ್ರೀಯ ಹೆದ್ದಾರಿ: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದವರು ಕಾಲಕಾಲಕ್ಕೆ ಹೊರಡಿಸಿರುವ ಅಧಿಸೂಚನೆಗಳಂತೆ ಸೇತುವೆ ಮತ್ತು ಅದರ ಕೂಡು ರಸ್ತೆ ಪೂರ್ಣಗೊಳಿಸಲು ತಗಲುವ ವೆಚ್ಚ ಹಾಗೂ ಆ ಸೇತುವೆಯ ಮೇಲೆ ಹಾದುಹೋಗುವ ವಾಹನಗಳ ಲೆಕ್ಕ ಇವುಗಳು ಶುಲ್ಕ ವಸೂಲಿಯ ಮಾನದಂಡಗಳಾಗಿವೆ. 19-2-1992 ರ ನಂತರ ಪೂರ್ಣಗೊಂಡ ಸೇತುವೆಗಳ ವೆಚ್ಚವು ರೂ.100.00 ಲಕ್ಷಕ್ಕೂ ಹೆಚ್ಚಿದ್ದಲ್ಲಿ ಹಾಗೂ 20-12-2001 ರ ನಂತರ ಪೂರ್ಣಗೊಂಡ ಸೇತುವೆಯ ವೆಚ್ಚವು ರೂ. 500.00 ಲಕ್ಷಕ್ಕೂ ಹೆಚ್ಚಿದ್ದಲ್ಲಿ ಅಂತಹ ಸೇತುವೆ ಮೇಲೆ ಸುಂಕ ವಸೂಲಾತಿಯನ್ನು ಮಾಡಲಾಗುವುದು, ವಾಹನದ ಶುಲ್ಕ ವಸೂಲಾತಿ (ಪ್ರತಿ ವಾಹನಕ್ಕೆ) ವಿವರ ಅನುಬಂಧದಲ್ಲಿ (ಅ) ನೀಡಲಾಗಿದೆ.

ಇ. ಅನುಬಂಧ-ಆ ನಲ್ಲಿ ನೀಡಲಾಗಿದೆ.

ಈ. ಅನುಬಂಧ-ಇ ನಲ್ಲಿ ನೀಡಲಾಗಿದೆ.

ಉ. ಹೌದು.

ಊ. ರಾಜ್ಯ ಹೆದ್ದಾರಿ: ಸೇತುವೆಗಳ ನಿರ್ಮಾಣಕ್ಕೆ ತಗಲಿರುವ ವೆಚ್ಚವನ್ನು (ಬಡ್ಡಿಯನ್ನು ಸೇರಿಸಿ) ಪೂರ್ಣವಾಗಿ ಇಲಾಖೆಗೆ ವಾಪಸ್ಸು ಪಡೆಯುವವರಿಗೆ ಸುಂಕ ವಸೂಲಿ ಮಾಡಬೇಕಾಗಿರುತ್ತದೆ.

ಸಾರಿಗೆ ಸಂಸ್ಥೆ ವಾಹನಗಳಿಗೂ ಸುಂಕ ವಸೂಲಾತಿ ಮಾಡಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ: ಸುಂಕ ವಸೂಲಾತಿಯನ್ನು ನಿರಂತರವಾಗಿ ಹಾಗೂ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ ಇವರಿಂದ ಮುಂದಿನ ಆದೇಶದವರೆಗೆ ವಸೂಲಿ ಮಾಡಲಾಗುತ್ತದೆ. ಸಾರಿಗೆ ಸಂಸ್ಥೆಯ ವಾಹನಗಳಿಂದಲೂ ಸುಂಕ ವಸೂಲಾತಿಯನ್ನು ಮಾಡಲಾಗುತ್ತಿದೆ. ನಿರಂತರ ಸುಂಕ ವಸೂಲಾತಿಯನ್ನು ಕೇಂದ್ರ ಸಾರಿಗೆ ಮಂತ್ರಾಲಯದ ಸುತ್ತೋಲೆ ಸಂಖ್ಯೆ: ಆರ್ ಡಬ್ಲ್ಯು: ಎನ್‌ಹೆಚ್ 11018:1:97-ಡಿಒ-1 ದಿನಾಂಕ 29-8-1997 ರಲ್ಲಿ ಹಾಗೂ ಸುತ್ತೋಲೆ ದಿನಾಂಕ 20-12-2001 ರಂತೆ ಸುಂಕ ವಸೂಲಿ ಮಾಡಲಾಗುತ್ತಿದೆ.

ಅನುಬಂಧ - (ಅ) (1)

ರಾಜ್ಯ ಹೆದ್ದಾರಿಗಳ ಮೇಲಿನ ಸೇತುವೆಗಳ ಸುಂಕ ವಸೂಲಾತಿ ವಿವರ

Sl. No.	Particulars of vehicles	Toll for bridges, cause ways and tunnels costing more than rupees fifty lakhs and constructed on or after 1.4.1983
1	2	3
1.	Motor cycle, scooter or any other two wheeled meachanically propelled vehicles.	NIL
2.	Autorikshaw, 3 wheeler, scooter or other auto driven light vehicles.	3-00
3.	Motor Car, Taxi, Jeep, van and auto driven light vehicles.	5-00
4.	Bus, Lorry and other heavy vehicles (excluding above vehicles) including multi axled vehicles.	
	LADEN	15-00
	UN-LADEN	10-00
5.	Other mechanically propelled havy vehicles namely, mobile cranes, Dozers, Earth Movers which have more than two axles and vehicles trailers (laden or un-laden).	15-00

ಅನುಬಂಧ - (ಅ) (2)

ರಾಷ್ಟ್ರೀಯ ಹೆದ್ದಾರಿ ಮೇಲಿನ ಸೇತುವೆಗಳ ಸುಂಕದ ವಸೂಲಾತಿ ವಿವರ

ಕ್ರಮ ಸಂಖ್ಯೆ	ವಾಹನಗಳ ವಿವರ	ಸುಂಕದ ದರ
1	2	3
1.	ಕಾರು, ಜೀಪು ಇತ್ಯಾದಿ	5-00
2.	ಹಗುರ ವಾಣಿಜ್ಯ ವಾಹನ ಮತ್ತು ಮಿನಿ ಬಸ್‌ಗಳು	10-00
3.	ಟ್ರಕ್, ಬಸ್ ಮತ್ತು ಮಲ್ಟಿ ಆಕ್ಸೆಲ್ ವಾಹನಗಳು	15-00

ಅನುಬಂಧ - ಆ

ರಾಜ್ಯ ಹೆದ್ದಾರಿಗಳ ಸೇತುವೆ ಸುಂಕದ ವಸೂಲಾತಿ ವಿವರ

1. ಮೈಸೂರು ವೃತ್ತದ ಮಂಡ್ಯ ಜಿಲ್ಲೆ, ಮದ್ದೂರು, ಶ್ರೀರಂಗಪಟ್ಟಣ ತಾಲ್ಲೂಕು ಹಾಗೂ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ವ್ಯಾಪ್ತಿಯಲ್ಲಿ ಮೂರು ಸೇತುವೆಗಳು.
2. ಶಿವಮೊಗ್ಗ ವೃತ್ತದ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಪಟ್ಟಣ ಪರಿಮಿತಿಯಲ್ಲಿ ರಾಜ್ಯ ಹೆದ್ದಾರಿ-19 ಆದ ಶ್ರೀರಂಗಪಟ್ಟಣ-ಬೀದರ್ ರಸ್ತೆಯ ಕಿ.ಮಿ.195.30ರಲ್ಲಿ ಸೇತುವೆ.

ರಾಷ್ಟ್ರೀಯ ಹೆದ್ದಾರಿ ಮೇಲಿನ ಸೇತುವೆಗಳ ವಿವರ

1. ಮಂಡ್ಯ ಜಿಲ್ಲೆಯ ಬೆಳ್ಳೂರು ಕ್ರಾಸ್ ಬಳಿ ರಾ.ಹೆ. 48 (ಕಿ.ಮಿ.104) ರಲ್ಲಿ ವೀರವೈಷ್ಣವಿ ಸೇತುವೆ.
2. ಕಾರವಾರ ಜಿಲ್ಲೆಯ ಸದಾಶಿವಗಡ ಮತ್ತು ಹೊನ್ನಾವರ ಬಳಿ ರಾ.ಹೆ. 17ರ ಕಿ.ಮೀ. 102ರಲ್ಲಿ ಕಾಳಿ ಸೇತುವೆ ಮತ್ತು 198 ರಲ್ಲಿ ಶರಾವತಿ ಸೇತುವೆ.
3. ಬಳ್ಳಾರಿ ಜಿಲ್ಲೆಯೋ ಪರಮದೇವ ರಾ.ಹೆ. 63 ರ ಕಿ.ಮಿ. 358 ರಲ್ಲಿ ಹಗರಿ ಸೇತುವೆ

ಅನುಬಂಧ - ಇ

ರಾಜ್ಯ ಹೆದ್ದಾರಿ ಮೇಲಿನ ರಸ್ತೆವಾರು ಸೇತುವೆಗಳ ವಿವರ

1. ಮೈಸೂರು ಲೋಕೋಪಯೋಗಿ ವೃತ್ತದ ವ್ಯಾಪ್ತಿಯಲ್ಲಿ ಮದ್ದೂರು ತಾಲ್ಲೂಕು, ಬೆಂಗಳೂರು-ಮೈಸೂರು (ಮಂಡ್ಯ ಮಾರ್ಗ) ರಾಜ್ಯ ಹೆದ್ದಾರಿ-17 ರಲ್ಲಿ 78 ನೇ ಕಿ.ಮೀ.ನಲ್ಲಿ ಶಿಂಷ ನದಿ ಸೇತುವೆ.
2. ಶ್ರೀರಂಗಪಟ್ಟಣ ತಾಲ್ಲೂಕು., ಮೈಸೂರು-ಕೊತ್ತತ್ತಿ ರಸ್ತೆಯ 18ನೇ ಕಿ.ಮೀ. ಮಹದೇವಪುರ ಬಳಿ ಕಾವೇರಿ ನದಿಗೆ ಅಡ್ಡಲಾಗಿರುವ ಸೇತುವೆ.
3. ನಂಜನಗೂಡು ತಾಲ್ಲೂಕು, ಹದಿನಾರು-ಸುತ್ತೂರು-ಬಿಳಿಗೆರೆ ರಸ್ತೆ 9ನೇ ಕಿ.ಮೀ. ನಲ್ಲಿ ಸುತ್ತೂರಿನ ಬಳಿ ಕಬಿನಿ ನದಿಗೆ ಅಡ್ಡಲಾಗಿರುವ ಸೇತುವೆ.
4. ಶಿವಮೊಗ್ಗ ಲೋಕೋಪಯೋಗಿ ಇಲಾಖೆಯ ವೃತ್ತದ ವ್ಯಾಪ್ತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಪಟ್ಟಣ ಪರಿಮಿತಿಯಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ-19 ಆದ ಶ್ರೀರಂಗಪಟ್ಟಣ-ಬೀದರ್ ರಸ್ತೆಯ ಕಿ.ಮೀ. 195.30ರಲ್ಲಿ ನಿರ್ಮಿಸಲಾಗಿರುವ ಸೇತುವೆ.

ರಾಷ್ಟ್ರೀಯ ಹೆದ್ದಾರಿ ರಸ್ತೆವಾರು ಸೇತುವೆಗಳ ವಿವರ

1. ರಾಷ್ಟ್ರೀಯ ಹೆದ್ದಾರಿ 48 ರ ಕಿ.ಮೀ. 104ರಲ್ಲಿ
2. ರಾಷ್ಟ್ರೀಯ ಹೆದ್ದಾರಿ 17ರ ಮೀ. 102 ಮತ್ತು ಕಿ.ಮೀ. 198 ರಲ್ಲಿ
3. ರಾಷ್ಟ್ರೀಯ ಹೆದ್ದಾರಿ 63 ರ ಕಿ.ಮೀ. 358 ರಲ್ಲಿ

ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿ ರಸ್ತೆಗಳಲ್ಲಿ ಸುಂಕ ವಸೂಲಾತಿ ಮಾಡಲಾಗುತ್ತಿಲ್ಲ.

ರಾಜ್ಯದಲ್ಲಿ ಅಕ್ರಮ ಸಕ್ರಮ ಒತ್ತುವರಿ ಪ್ರಕರಣಗಳು

803 (1526) - ಶ್ರೀ ಅಪ್ಪಚ್ಚು ರಾಜನ್ ಎಂ.ಪಿ. (ಸೋಮವಾರಪೇಟೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಅಕ್ರಮ-ಸಕ್ರಮ ಒತ್ತುವರಿ ಪ್ರಕರಣಗಳಲ್ಲಿ ಇತ್ಯರ್ಥವಾಗದೆ ಇರುವ ಜಿಲ್ಲಾವಾರು ಪ್ರಕರಣಗಳೆಷ್ಟು.

ಆ. ಅಕ್ರಮ-ಸಕ್ರಮ ಸಮಿತಿಗೆ (ಬಗರ್ ಹುಕುಂ) ಹಾಜರಾಗುವ ಸಮಿತಿ ಸದಸ್ಯರಿಗೆ ಯಾವ ನಿಯಮಗಳ ರೀತ್ಯಾ ಭತ್ಯೆ ನೀಡಲಾಗುವುದು;

ಇ. ಈಗ ದಿನ ಭತ್ಯೆ ಮತ್ತು ಪ್ರವಾಸ ಭತ್ಯೆ ಮಂಜೂರು ಮಾಡದಿರಲು ಕಾರಣಗಳೇನು.

ಈ. ವಿಳಂಬಕ್ಕೆ ಯಾರು ಹೊಣೆ, ಯಾವಾಗ ಮಂಜೂರು ಮಾಡಲಾಗುತ್ತದೆ.

ಉ. ಈ ಸಮಿತಿಗಳಿರುವ ಜಿಲ್ಲಾವಾರು ಸದಸ್ಯರ ಸಂಖ್ಯೆ ಎಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ:2:ಸನಿತಿ:99 ದಿನಾಂಕ 22-4-1999ರ ಆದೇಶಾನುಸಾರ ಅಧಿಕಾರೇತರ ಸದಸ್ಯರಿಗೆ ಭತ್ಯೆ ನೀಡಲಾಗುತ್ತದೆ.

ಇ. ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ: 07: ಎಲ್‌ಜಿಪಿ: 2001 ದಿನಾಂಕ 15-7-2002ರ ಆದೇಶದಲ್ಲಿ ರೂ. 10 ಲಕ್ಷ ಹಣ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ.

ಈ. - ಉದ್ಭವಿಸುವುದಿಲ್ಲ.-

ಉ. ಜಿಲ್ಲಾವಾರು ಸಂಖ್ಯೆ ವಿವರಗಳನ್ನು ಅನುಬಂಧ-ದಲ್ಲಿ ನೀಡಿದೆ.

Sl. No.	Name of the District	Applications Nos.	Pending Extent (in acres)	No. of committees	No. of Members
1	Bangalore	20042	33501	3	12
2	Bangalore-R	62248	139086	8	32
3	Kolar	67043	173893	12	48
4	Tumkur	82075	233526	14	56
5	Chitradurga	53985	164596	7	28
6	Davanagere	38067	92644	7	28
7	Shimoga	110130	275915	8	32